ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-೬೫

ಯಡಿಯೂರು ಹೋಬಳಿಯಲ್ಲಿ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **21.02.2014**

ಈ ವಾರದ ಮುನ್ಸೂಚನೆ (ದಿನಾಂಕ **22-02-14 to 26.02.14** ವರೆಗೆ)

ನಿಯತಾಂಕಗಳು	22/02/14	23/02/14	24/02/14	25/02/14	26/02/14
ಮಳೆ (ಮಿ ಮಿ)	1	2	1	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	32	31	30	31	31
ಕನಿಷ್ಠ ಉಷ್ಣಾಂಶ (ಡಿ.ಸೆ.)	19	19	18	17	17
ಮೋಡ (ಪ್ರಮಾಣ)	3	2	1	1	3
ಅರ್ದ್ರತೆ ೭.೨೦ ಬೆ (ಶೇ)	70	75	80	86	88
ಅರ್ದ್ರತೆ ೨.೨೦ ಮ (ಶೇ)	35	43	36	25	32
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	4	5	5	4
ಗಾಳಿಯ ದಿಕ್ಕು (ಡಿಗ್ರಿ)	190	140	120	120	140

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ತುಮಕೂರು ಹಾಗೂ ಸುತ್ತಮುತ್ತ ಒಣಹವೆ ಮುಂದುವರೆಯಲಿದ್ದು, ಕೆಲವೊಮ್ಮೆ ಸಂಜೆಯ ವೇಳೆ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ ಹಾಗೂ ತುಂತುರು ಮಳೆಯಾಗುವ ಸಾಧ್ಯತೆಯಿದೆ. ದಿನದ ಗರಿಷ್ಠ ಉಷ್ಣಾಂಶ **30.0-32.0°C** ಮತ್ತು ಕನಿಷ್ಠ **17.0-19.0 °C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **70-88 %** ಇದ್ದು, ಮಧ್ಯಾಹ್ನ **25-43 %** ಇರುವುದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ **4-5** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಫೆಬ್ರವರಿ ತಿಂಗಳಲ್ಲಿ ಬೆಳೆಯಬಹುದಾದ ತಳಿಗಳು:

ರಾಗಿ: ಇಂಡಾಫ್ಲ್-೫, ಜಿ.ಪಿ.ಯು-26, ಜಿ.ಪಿ.ಯು- 48. ಸೂರ್ಯಕಾಂತಿ: ಮಾರ್ಡೆನ್, ಕೆ.ಬಿ.ಎಸ್.ಹೆಚ್-1, ಕೆ.ಬಿ.ಎಸ್.ಹೆಚ್-41, ಕೆ.ಬಿ.ಎಸ್.ಹೆಚ್-42 ಕೆ.ಬಿ.ಎಸ್.ಹೆಚ್-44. ಅಲಸಂದೆ: ಸಿ-152. ಉದ್ದು: ಟಿ-9, ರಶ್ಮಿ. ಪಾಪ್ ಕಾರ್ನ್: ಅಂಬರ್, ಶಕ್ತಿಮಾನ್ ಮುಸುಕಿನ ಜೋಳ: ಗಂಗಾ-11, ನಿತ್ಯಶ್ರೀ.

ಹಗುರವಾದ ಮಳೆ ಬರುವ ಸಾಧ್ಯತೆಯಿರುವುದರಿಂದ ಔಷಧಿ ಸಿಂಪಡಣೆಯನ್ನು ಮುಂದೂಡುವುದು ಒಳ್ಳೆಯದು.

ವಾತಾವರಣದಲ್ಲಿ ಉಷ್ಣಾಂಶ ಕಡಿಮೆ ಇರುವುದರಿಂದ ತರಕಾರಿಗಳಲ್ಲಿ ಕಂದುಬರುವ ಬೂಜು ರೋಗ ಮತ್ತು ಆಲೂಗಡ್ಡೆ ಬೆಳೆಯಲ್ಲಿ ಕಂಡುಬರುವ ಕೊನೆ ಅಂಗಮಾರಿ ರೋಗಗಳ ನುಯಂತ್ರಣಕ್ಕೆ ರಿಡೊಮಿಲ್/Ridomil (2 ಗ್ರಾಂ/ಪ್ರತಿ ಲೀಟರ್ ನೀರಿಗೆ) ಅಥವಾ ಮೆಲೊಡಿ ಡಿಯೊ/Melody Duo (3 ಮಿ.ಲೀ/ಪ್ರತಿ ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

ಕ್ಯಾಪ್ಸಿಕಂ: ಬೂದಿ ರೋಗಕ್ಕೆ ನೇಟಿವೋ ಅನ್ನು ಸಿಂಪಡಿಸಿ.

ತರಕಾರಿ ಬೆಳೆಗಳಲ್ಲಿ ಲೀಫ್ ಮೈನರ್ ಹುಳು ಹೆಚ್ಚಾಗಿದ್ದರೆ ಅಬಾಮೆಕ್ಟಿನ್ (3 ಮಿ.ಲೀ/ಪ್ರತಿ 10 ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

- **ತೊಗರಿಯಲ್ಲಿ ಕಾಯಿ ಕೊರೆಯುವ ಹುಳು ಕಂಡುಬಂದಲ್ಲಿ ಲ್ಯಾನೇಟ್ (ಮಿಥೊಮಿಲ್) (1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ. ಇದಲ್ಲದೇ, ಫ್ಲಾಶ್ ಅಥವಾ ಎಕಾಲಕ್ಸ್ (2 ಮಿ.ಲೀ. ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ.**
- **ಬೂದಿ ರೋಗ ಹರಡಲು ಇದು ಸೂಕ್ತ ಕಾಲವಾಗಿರುವುದರಿಂದ ಸಲ್ಫೆಕ್ಸ್ (ಗಂಧಕ) ಅನ್ನು ಸಿಂಪಡಿಸಲು ಸೂಚಿಸಲಾಗಿದೆ.**
- **ರಸ ಹೀರುವ ಕೀಟಗಳ ನಿಯಂತ್ರಣಕ್ಕೆ 5% ಬೇವಿನ ಕಷಾಯಅಥವಾ Blaze/ಬ್ಲೇಜ್ (1.5-2ಗ್ರಾಂ/ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ.**
- **ದನಕರುಗಳಿಗೆ ಕಾಲುಬಾಯಿ ರೋಗ ಕಂಡುಬಂದಿರುವುದರಿಂದ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು.**

ನೋಡಲ್ ಅಧಿಕಾರಿ:

ಡಾ.ಎಮ್.ಬಿ. ರಾಜೇಗೌಡ

ಬೆಂಗಳೂರು